**3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದಲ್ಲಿ, ತುಮಕೂರು.**

**Spl.C. 539/2023**

**ಫಿರ್ಯಾದುದಾರರು:** ರಾಜ್ಯ ಸರ್ಕಾರದ ಪರವಾಗಿ
ಹುಲಿಯೂರುದುರ್ಗ ಪೊಲೀಸ್ ಠಾಣೆ

**ವಿರುದ್ಧ**

**ಆರೋಪಿತರು:** 1) ಚೇತನ್ ಕುಮಾರ್ @ ಚೇತನ್ ,
ಬಿನ್ ಲೇಟ್ ರಾಮಕೃಷ್ಣ, 35 ವರ್ಷ,

2) ಸೌಮ್ಯಶ್ರೀ ಕೋಂ ಚೇತನ್, 27 ವರ್ಷ,
1 ಮತ್ತು 2 ನೇ ಆರೋಪಿತರು ಚೌಡನಕುಪ್ಪೆ ಗ್ರಾಮ,
ಹುಲಿಯೂರುದುರ್ಗ ಹೋಬಳಿ, ಕುಣಿಗಲ್ ತಾಲ್ಲೂಕಿನ
ನಿವಾಸಿಗಳು.

**ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರಡಿಯಲ್ಲಿ ಆರೋಪಿತರ ಹೇಳಿಕೆ**

ಪ್ರಶ್ನೆ.1) ಅಭಿಯೋಜನೆಯ ಪರ ನುಡಿದಿರುವ ಸಾಕ್ಷಿದಾರರ ಹೇಳಿಕೆಗಳನ್ನು ಕೇಳಿದ್ದೀರಾ?

ಉತ್ತರ:
ಆರೋಪಿ 1:
ಆರೋಪಿ 2:

ಪ್ರಶ್ನೆ.2) ಪ್ರಾಸಾ.1 ಬೆಟ್ಟಸ್ವಾಮಿ, ಇವರು ತಮ್ಮ ಸಾಕ್ಷಿಯಲ್ಲಿ 2022 ರಲ್ಲಿ 2 ನೇ ಆರೋಪಿ ಸೌಮ್ಯರವರು ತನ್ನ ಬಳಿ ಬಂದು 8 ಗ್ರಾಂ ತೂಕದ ಕಿವಿಯ ಮಾಟಿಯನ್ನು ಕೊಟ್ಟು ರೂ.22,000 ಹಣವನ್ನು ಹುಲಿಯೂರುದುರ್ಗದಲ್ಲಿ ಅಡವಿಟ್ಟು

ತಂದುಕೊಡುವಂತೆ ಹೇಳಿದ್ದು, ಅದರಂತೆ ತಾನು ಒಡವೆಯನ್ನು ಅಡವಿಟ್ಟು ರೂ.22,000 ಹಣವನ್ನು ತಂದು ನಿಮಗೆ ಕೊಟ್ಟಿರುತ್ತೇನೆ. ಅದರಲ್ಲಿ ನಿಮ್ಮ ಕಡೆಯಿಂದ ತಾನು ರೂ.3,000 ಸಾಲ ಪಡೆದುಕೊಂಡಿರುತ್ತೇನೆ ಎಂದು ನುಡಿದಿದ್ದಾರೆ. ಅದಕ್ಕೆ ನೀವು ಏನು ಹೇಳುವಿರಿ ?

ಉತ್ತರಃ

ಆರೋಪಿ 1ಃ

ಆರೋಪಿ 2ಃ

ಪ್ರಶ್ನೆ.3) ಪ್ರಾಸಾ.1 ರವರು ಮುಂದುವರಿದು ತನ್ನ ಸಾಕ್ಷಿಯಲ್ಲಿ ದಿನಾಂಕ 11.06.2023 ರಂದು 2 ನೇ ಆರೋಪಿಯಾದ ನೀವು ಬಂದು ಒಡವೆಯನ್ನು ಬಿಡಿಸಿಕೊಂಡು ಬಂದು ಕೊಡುವಂತೆ ಕೇಳಿದ್ದು, ಆಗ ಹಣ ತನ್ನ ಬಳಿ ಇರುವುದಿಲ್ಲ , ನಾಳೆ ಹೋಗಿ ಬಿಡಿಸಿಕೊಂಡು ಬರುತ್ತೇನೆಂದು ಹೇಳಿರುತ್ತೇನೆ. ಆದರೆ ನೀವು ನನಗೆ ಈಗಲೇ ಒಡವೆ ಬೇಕೇ ಬೇಕು ಎಂದು ಕೇಳಿದ್ದು, ತಾನು ನಾಳೆ ಬೆಳಿಗ್ಗೆ ಬಿಡಿಸಿಕೊಂಡು ಬರುತ್ತೇನೆಂದು ಹೇಳಿದಾಗ, ನಿಮ್ಮ ಜೊತೆಯಲ್ಲಿ ಬಂದಿದ್ದ ನಿಮ್ಮ ಗಂಡ 1 ನೇ ಆರೋಪಿ ಚೇತನ್ ರವರು ಅವರ ಕೈಯಲ್ಲಿದ್ದ ಅಂಗಡಿಯ ಬೀಗದ ಕೈ ನಿಂದ ತನ್ನ ಎಡಕಣ್ಣಿನ ಹುಬ್ಬಿಗೆ ಹೊಡೆದಿರುತ್ತಾನೆ ಎಂದು ನುಡಿದಿರುತ್ತಾರೆ. ಅದಕ್ಕೆ ನೀವು ಏನು ಹೇಳುವಿರಿ ?

ಉತ್ತರಃ

ಆರೋಪಿ 1ಃ

ಆರೋಪಿ 2ಃ

ಪ್ರಶ್ನೆ.4) ಪ್ರಾಸಾ.1 ರವರು ಮುಂದುವರಿದು ತನ್ನ ಸಾಕ್ಷಿಯಲ್ಲಿ 2 ನೇ ಆರೋಪಿಯಾದ ನೀವು ಸ್ಥಳದಲ್ಲಿದ್ದ ದೊಣ್ಣೆಯನ್ನು ತೆಗೆದುಕೊಂಡು ತನ್ನ ಬಲಭುಜದ ಹಿಂಭಾಗಕ್ಕೆ

ಹೊಡೆದಿದ್ದು, ನಂತರ ನೀವು ಬೀಗದ ಕೈ ಮತ್ತು ದೊಣ್ಣೆಯನ್ನು ಸ್ಥಳದಲ್ಲಿಯೇ ಬಿಸಾಕಿ ಹೋಗಿರುತ್ತೀರಿ ಎಂದು ನುಡಿದಿರುತ್ತಾರೆ. ಅದಕ್ಕೆ ನೀವು ಏನು ಹೇಳುವಿರಿ ?

ಉತ್ತರಃ

ಆರೋಪಿ 1ಃ

ಆರೋಪಿ 2ಃ

ಪ್ರಶ್ನೆ.5) ಪ್ರಾಸಾ.2 ಅಮ್ಮುಬಾಯಿ, ಇವರು ತಮ್ಮ ಸಾಕ್ಷಿಯಲ್ಲಿ ಸುಮಾರು ಒಂದು ವರ್ಷದ ಹಿಂದೆ ರಾತ್ರಿ 10.30 ಗಂಟೆಗೆ ತಾನು ತಮ್ಮ ಮನೆಯ ಬಾಗಿಲಲ್ಲಿ ನಿಂತಿದ್ದಾಗ ಚಾಸಾ.1 ಬೆಟ್ಟಸ್ವಾಮಿರವರು ತಮ್ಮ ಮನೆಯ ಮುಂದೆ ಇರುವ ರಸ್ತೆಯಲ್ಲಿ ಬರುತ್ತಿದ್ದಾಗ 1 ಮತ್ತು 2 ನೇ ಆರೋಪಿತರಾದ ನೀವು ಬಂದಿದ್ದು, 2 ನೇ ಆರೋಪಿಯು ಕಡ್ಡಿಯಿಂದ ಅವರ ಬಲಭುಜಕ್ಕೆ ಹೊಡೆದಿದ್ದು, 1 ನೇ ಆರೋಪಿಯು ನಿಮ್ಮ ಕೈಯಲ್ಲಿದ್ದ ಕೀ ಯಿಂದ ಅವರ ಎಡಕಣ್ಣಿನ ಹುಬ್ಬಿಗೆ ಹೊಡೆದಿರುತ್ತೀರಿ. ಅಲ್ಲದೇ ಅವರಿಗೆ ಹಣ ಕೊಡು ಎಂದು ಬೈಯ್ಯುತ್ತಿದ್ದರು ಎಂದು ನುಡಿದಿರುತ್ತಾರೆ. ಅದಕ್ಕೆ ನೀವು ಏನು ಹೇಳುವಿರಿ ?

ಉತ್ತರಃ

ಆರೋಪಿ 1ಃ

ಆರೋಪಿ 2ಃ

ಪ್ರಶ್ನೆ.6) ಪ್ರಾಸಾ.2 ರವರು ಮುಂದುವರಿದು ತನ್ನ ಸಾಕ್ಷಿಯಲ್ಲಿ ಆರೋಪಿತರು ತರಕಾರಿ ವ್ಯಾಪಾರ ಮಾಡುತ್ತಿದ್ದು, ಚಾಸಾ.1 ರವರು ನಾಳೆ ಬೆಳಿಗ್ಗೆವರೆಗೆ ಸಮಯ ಕೊಡಿ , ಹಣ ಕೊಡುತ್ತೇನೆಂದು ನಿಮಗೆ ಕೇಳುತ್ತಿದ್ದರು. ತಾನು ಗಲಾಟೆಯನ್ನು ಬಿಡಿಸಲು ಪ್ರಯತ್ನಿಸಿರುತ್ತೇನೆ. ಆರೋಪಿತರು ಕಡ್ಡಿ ಮತ್ತು ಕೀನ್ನು ಸ್ಥಳದಲ್ಲಿ ಬಿಸಾಕಿ ಹೋಗಿರುತ್ತಾರೆ. ಗಲಾಟೆಯನ್ನು ತಾನು ಲೈಟಿನ ಬೆಳಕಿನಲ್ಲಿ ನೋಡಿರುತ್ತೇನೆ. ಸ್ಥಳಕ್ಕೆ

ಮಾರುತಿಮೋಹನ್ ರವರು ಬಂದು ಜಗಳವನ್ನು ಬಿಡಿಸಿಕೊಂಡಿರುತ್ತಾರೆ ಎಂದು ನುಡಿದಿರುತ್ತಾರೆ. ಅದಕ್ಕೆ ನೀವು ಏನು ಹೇಳುವಿರಿ?

ಉತ್ತರಃ

ಆರೋಪಿ 1ಃ

ಆರೋಪಿ 2ಃ

ಪ್ರಶ್ನೆ.7) ಪ್ರಾಸಾ.3 ಮಾರುತಿ ಮೋಹನ್ ಇವರು ತನ್ನ ಸಾಕ್ಷಿಯಲ್ಲಿ ದಿಃ11.06.2023 ರಂದು ರಾತ್ರಿ 10.30 ಗಂಟೆಗೆ ತಾನು ಅಂಗಡಿಯನ್ನು ಮುಚ್ಚಿ ಮನೆಗೆ ಹೋಗುತ್ತಿದ್ದಾಗ ಚಾಸಾ.1 ರವರು ತಮ್ಮ ಅಂಗಡಿಯ ಮುಂಭಾಗದಲ್ಲಿ ನಿಂತಿದ್ದರು. ಆಗ ಆರೋಪಿತರು ಬಂದು ಏಕಾಏಕಿ ಚಾಸಾ.1 ರವರಿಗೆ ಅವರಿಗೆ ಕೊಡಬೇಕಾಗಿದ್ದ ರೂ.3,000 ಹಣವನ್ನು ಕೊಡು ಎಂದು ಒತ್ತಾಯ ಮಾಡುತ್ತಿದ್ದು, ಅದಕ್ಕೆ ಚಾಸಾ.1 ರವರು ತನ್ನ ಬಳಿ ತಕ್ಷಣಕ್ಕೆ ಇರುವುದಿಲ್ಲ, ಆಮೇಲೆ ಕೊಡುತ್ತೇನೆಂದು ಹೇಳುತ್ತಿದ್ದರು ಎಂದು ನುಡಿದಿರುತ್ತಾರೆ. ಅದಕ್ಕೆ ನೀವು ಏನು ಹೇಳುವಿರಿ?

ಉತ್ತರಃ

ಆರೋಪಿ 1ಃ

ಆರೋಪಿ 2ಃ

ಪ್ರಶ್ನೆ.8) ಪ್ರಾಸಾ.3 ರವರು ಮುಂದುವರಿದು ತನ್ನ ಸಾಕ್ಷಿಯಲ್ಲಿ ಆರೋಪಿತರಾದ ನೀವು ಚಾಸಾ.1 ರವರಿಗೆ ಜಾತಿ ಹಿಡಿದು ಬೈದಿದ್ದು, 1 ನೇ ಆರೋಪಿಯು ತನ್ನ ಕೈಯಲ್ಲಿದ್ದ ಕೀ ಬಂಚ್ ಯಿಂದ ಚಾಸಾ.1 ರವರ ಎಡಕಣ್ಣಿನ ಹುಬ್ಬಿಗೆ ಹೊಡೆದಿರುತ್ತಾನೆ, 2 ನೇ ಆರೋಪಿಯು ದೊಣ್ಣೆಯಿಂದ ಚಾಸಾ.1 ರವರ ಬಲಭುಜದ ಹಿಂಭಾಗಕ್ಕೆ ಹೊಡೆದಿರುತ್ತಾರೆ ಎಂದು ನುಡಿದಿರುತ್ತಾರೆ. ಅದಕ್ಕೆ ನೀವು ಏನು ಹೇಳುವಿರಿ?

ಉತ್ತರಃ

ಆರೋಪಿ 1ಃ

ಆರೋಪಿ 2ಃ

ಪ್ರಶ್ನೆ.9) ಪ್ರಾಸಾ.4 ಕುಮಾರ್ ರಾವ್, ಇವರು ತನ್ನ ಸಾಕ್ಷಿಯಲ್ಲಿ ದಿಃ11.06.2023 ರಂದು ರಾತ್ರಿ 10.30 ಗಂಟೆಗೆ ತಾನು ತಮ್ಮ ಊರಿನ ಬಸ್ ನಿಲ್ದಾಣದ ಹತ್ತಿರ ಕೇಶವ ಮತ್ತು ಇತರರೊಂದಿಗೆ ನಿಂತಿದ್ದಾಗ, ಚಾಸಾ.1 ಬೆಟ್ಟಸ್ವಾಮಿರವರೂ ಸಹ ಸ್ವಲ್ಪ ದೂರದಲ್ಲಿ ನಿಂತಿದ್ದರು. ಆಗ 1 ನೇ ಆರೋಪಿಯಾದ ನೀವು ಏಕಾಏಕಿ ಬಂದು ಅವರ ಮೇಲೆ ಗಲಾಟೆ ಮಾಡಿ ಕೀಯಿಂದ ಚಾಸಾ.1 ರವರ ಎಡಗಣ್ಣಿನ ಮೇಲ್ಭಾಗಕ್ಕೆ ಹೊಡೆದಿರುತ್ತಾರೆ. ನಂತರ 2 ನೇ ಆರೋಪಿಯು ಬಂದು ನನ್ನ ಹಣ ವಾಪಸ್ ಕೊಡು ಎಂದು ಹೇಳಿ ನೀಲಗಿರಿ ದೊಣ್ಣೆಯಿಂದ ಅವರ ಬಲಭುಜಕ್ಕೆ ಹೊಡೆದಿರುತ್ತಾರೆ ಎಂದು ನುಡಿದಿರುತ್ತಾರೆ. ಅದಕ್ಕೆ ನೀವು ಏನು ಹೇಳುವಿರಿ?

ಉತ್ತರಃ

ಆರೋಪಿ 1ಃ

ಆರೋಪಿ 2ಃ

ಪ್ರಶ್ನೆ.10) ಪ್ರಾಸಾ.5 ಪುನೀತ್ ಗೌಡ, ಇವರು ತನ್ನ ಸಾಕ್ಷಿಯಲ್ಲಿ ದಿಃ13.06.2023 ರಂದು ತಮ್ಮ ಊರಿನ ಸರ್ಕಲ್ ನಲ್ಲಿರುವ ಶಿವಾಜಿ ಹೋಟೇಲ್ ಹತ್ತಿರ ಪೊಲೀಸರು ಬಂದು ಸ್ಥಳವನ್ನು ಪರಿಶೀಲಿಸಿ ಮಹಜರನ್ನು ಮಾಡಿಕೊಂಡು ಸ್ಥಳದಲ್ಲಿ ಒಂದು ನೀಲಗಿರಿ ದೊಣ್ಣೆ ಮತ್ತು ಕೀ ಬಂಚ್ ನ್ನು ವಶಕ್ಕೆ ತೆಗೆದುಕೊಂಡಿರುತ್ತಾರೆ. ಪೊಲೀಸರು ಮಾಡಿದ ಪಂಚನಾಮೆಗೆ ತಾನು ಸಹಿ ಮಾಡಿರುತ್ತೇನೆ, ಆಗ ತನ್ನೊಂದಿಗೆ ಚಾಸಾ.1 ಮತ್ತು 10 ರವರು ಇದ್ದರು. ಚಾಸಾ.1 ರವರು ಏನೆಲ್ಲಾ ಆಯಿತು ಎಂದು ಪೊಲೀಸರಿಗೆ ಮಾಹಿತಿಯನ್ನು ನೀಡುತ್ತಿದ್ದರು ಎಂದು ನುಡಿದಿರುತ್ತಾರೆ. ಅದಕ್ಕೆ ನೀವು ಏನು ಹೇಳುವಿರಿ?

ಉತ್ತರಃ

ಆರೋಪಿ 1ಃ

ಆರೋಪಿ 2ಃ

ಪ್ರಶ್ನೆ.11) ಪ್ರಾಸಾ.6 ಡಾಃಅಕ್ಷಯ್.ಎಸ್. ಇವರು ತನ್ನ ಸಾಕ್ಷಿಯಲ್ಲಿ ದಿಃ12.06.2023 ರಂದು ಮಧ್ಯಾಹ್ನ 1.00 ಗಂಟೆ ಸಮಯದಲ್ಲಿ ಚಾಸಾ.1 ಬೆಟ್ಟಸ್ವಾಮಿರವರು ಹಲ್ಲೆಯ ಹಿನ್ನೆಲೆಯಲ್ಲಿ ಚಿಕಿತ್ಸೆಗಾಗಿ ಬಂದಿದ್ದು, ಅವರನ್ನು ಪರೀಕ್ಷಿಸಿದಾಗ ಅವರಿಗೆ ಆದ ಗಾಯಗಳು ಸಾಮಾನ್ಯ ಸ್ವರೂಪದ ಗಾಯಗಳು ಎಂದು ಅಭಿಪ್ರಾಯಕ್ಕೊಳಪಟ್ಟು ನಿಪಿ.11 ರಂತೆ ಗಾ.ಪ್ರ.ಪತ್ರವನ್ನು ನೀಡಿರುತ್ತೇನೆ ಎಂದು ನುಡಿದಿರುತ್ತಾರೆ. ಅದಕ್ಕೆ ನೀವು ಏನು ಹೇಳುವಿರಿ ?

ಉತ್ತರಃ

ಆರೋಪಿ 1ಃ

ಆರೋಪಿ 2ಃ

ಪ್ರಶ್ನೆ.12) ಪ್ರಾಸಾ.7 ಮಂಜುನಾಥ.ಹೆಚ್.ವಿ, ಇವರು ತಮ್ಮ ಸಾಕ್ಷಿಯಲ್ಲಿ ದಿಃ19.08.2022 ರಂದು ಚಾಸಾ.1 ಮತ್ತು ಅವರ ತಾಯಿಯವರು ತಮ್ಮ ಅಂಗಡಿಗೆ ಬಂದು ಬಂಗಾರದ ಗೆಜ್ಜೆಮಾಟಿಯನ್ನು ಗಿರವಿ ಇಟ್ಟು ರೂ.22,000 ಹಣವನ್ನು ಪಡೆದುಕೊಂಡಿರುತ್ತಾರೆ. ಸದರಿ ಆಭರಣವು ತಮ್ಮ ಅಂಗಡಿಯಲ್ಲಿಯೇ ಇದ್ದು, ಸುಮಾರು 8 ತಿಂಗಳ ನಂತರ ಸದರಿ ಒಡವೆಯ ಬಗ್ಗೆ ವಿವಾದವಾಗಿದ್ದು ಅದು ಚಾಸಾ.1 ಮತ್ತು ಅವರ ತಾಯಿಯದ್ದಲ್ಲ ಎಂದು ಗೊತ್ತಾಗಿರುತ್ತದೆ ಎಂದು ನುಡಿದಿದ್ದಾರೆ. ಅದಕ್ಕೆ ನೀವು ಏನು ಹೇಳುವಿರಿ ?

ಉತ್ತರಃ

ಆರೋಪಿ 1ಃ

ಆರೋಪಿ 2ಃ

ಪ್ರಶ್ನೆ.13) ಪ್ರಾಸಾ.8 ಕೆಂಪಹೊನ್ನಯ್ಯ, ಇವರು ತಮ್ಮ ಸಾಕ್ಷಿಯಲ್ಲಿ ದಿನಾಂಕ 12.06.2023 ರಂದು ಮಧ್ಯಾಹ್ನ 3.30 ಗಂಟೆಗೆ ಚಾಸಾ.1 ರವರು ಠಾಣೆಗೆ ಹಾಜರಾಗಿ ನಿಪಿ.1 ರಂತೆ ದೂರನ್ನು ಸಲ್ಲಿಸಿದ್ದು, ಅದನ್ನು ಸ್ವೀಕರಿಸಿ ಪ್ರಕರಣವನ್ನು

ದಾಖಲು ಮಾಡಿಕೊಂಡು ಪ್ರ.ವ.ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ ಎಂದು ನುಡಿದಿದ್ದಾರೆ. ಅದಕ್ಕೆ ನೀವು ಏನು ಹೇಳುವಿರಿ ?

ಉತ್ತರಃ

ಆರೋಪಿ 1ಃ

ಆರೋಪಿ 2ಃ

ಪ್ರಶ್ನೆ.14) ಪ್ರಾಸಾ.9 ಲಕ್ಷ್ಮೀಕಾಂತ್.ಆರ್. ಡಿವೈಎಸ್‌ಪಿ, ಇವರು ತಮ್ಮ ಸಾಕ್ಷಿಯಲ್ಲಿ ದಿನಾಂಕ 12.06.2023 ರಂದು ತುಮಕೂರಿನ ಪೊಲೀಸ್ ಅಧೀಕ್ಷಕರು ತನ್ನನ್ನು ಈ ಪ್ರಕರಣದ ತನಿಖಾಧಿಕಾರಿಯಾಗಿ ನೇಮಿಸಿ ಆದೇಶವನ್ನು ಮಾಡಿದ್ದು, ಅದರಂತೆ ದಿಃ 13.06.2023 ರಂದು ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿ ಪಂಚರಾದ ಚಾಸಾ.9 ಮತ್ತು 10 ರವರ ಸಮಕ್ಷಮ ಬೆಳಿಗ್ಗೆ 8.15 ರಿಂದ 9.15 ರವರೆಗೆ ಚಾಸಾ.1 ರವರು ತೋರಿಸಿದ ಸ್ಥಳದಲ್ಲಿ ಕೃತ್ಯ ನಡೆದ ಸ್ಥಳದ ಪಂಚನಾಮೆಯನ್ನು ಮಾಡಿಕೊಂಡಿರುತ್ತೇನೆ ಎಂದು ನುಡಿದಿದ್ದಾರೆ. ಅದಕ್ಕೆ ನೀವು ಏನು ಹೇಳುವಿರಿ ?

ಉತ್ತರಃ

ಆರೋಪಿ 1ಃ

ಆರೋಪಿ 2ಃ

ಪ್ರಶ್ನೆ.15) ಪ್ರಾಸಾ.9 ರವರು ಮುಂದುವರಿದು ತಮ್ಮ ಸಾಕ್ಷಿಯಲ್ಲಿ ಪಂಚನಾಮೆಯ ಕಾಲದಲ್ಲಿ ಭಾವಚಿತ್ರವನ್ನು ತೆಗೆಸಿ, ಚಾಸಾ.1 ರವರು ಹಾಜರುಪಡಿಸಿದ ಒಂದು ಕೀ ಬಂಚ್ ಮತ್ತು ಒಂದು ನೀಲಗಿರಿ ದೊಣ್ಣೆಯನ್ನು ವಶಕ್ಕೆ ತೆಗೆದುಕೊಂಡಿರುತ್ತೇನೆ ಎಂದು ನುಡಿದಿದ್ದಾರೆ. ಅದಕ್ಕೆ ನೀವು ಏನು ಹೇಳುವಿರಿ ?

ಉತ್ತರಃ

ಆರೋಪಿ 1ಃ

ಆರೋಪಿ 2ಃ

ಪ್ರಶ್ನೆ.16) ಪ್ರಾಸಾ.9 ರವರು ಮುಂದುವರಿದು ತಮ್ಮ ಸಾಕ್ಷಿಯಲ್ಲಿ ಅದೇ ದಿನ ಚಾಸಾ.17 ರವರು 1 ನೇ ಆರೋಪಿಯನ್ನು ವಶಕ್ಕೆ ತೆಗೆದುಕೊಂಡು ತನ್ನ ಮುಂದೆ ಹಾಜರುಪಡಿಸಿ ವರದಿಯನ್ನು ನೀಡಿರುತ್ತಾರೆ. ನಂತರ ದಸ್ತಗಿರಿ ನಿಯಮಾವಳಿಗಳನ್ನು ಪಾಲನೆ ಮಾಡಿ 1 ನೇ ಆರೋಪಿಯನ್ನು ನ್ಯಾಯಾಂಗ ಬಂಧನಕ್ಕಾಗಿ ಮಾನ್ಯ ನ್ಯಾಯಾಲಯದ ಮುಂದೆ ಹಾಜರುಪಡಿಸಿರುತ್ತೇನೆ. ನ್ಯಾಯಾಲಯದ ಮುಂದೆ ಇರುವ 1 ನೇ ಆರೋಪಿಯನ್ನು ಗುರುತಿಸುತ್ತೇನೆ ಎಂದು ನುಡಿದಿದ್ದಾರೆ. ಅದಕ್ಕೆ ನೀವು ಏನು ಹೇಳುವಿರಿ ?

ಉತ್ತರಃ

ಆರೋಪಿ 1ಃ

ಆರೋಪಿ 2ಃ

ಪ್ರಶ್ನೆ.17) ಪ್ರಾಸಾ.9 ರವರು ಮುಂದುವರಿದು ತನ್ನ ಸಾಕ್ಷಿಯಲ್ಲಿ ಅದೇ ದಿನ ಚಾಸಾ.1 ರವರ ಮುಂದುವರಿದ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ ಹಾಗೂ ಚಾಸಾ.9 ರವರ ಹೇಳಿಕೆಯನ್ನು ಸಹ ಪಡೆದುಕೊಂಡಿರುತ್ತೇನೆ. ದಿಃ15.06.2023 ರಂದು ಚಾಸಾ.2 ಮತ್ತು 3 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ ಎಂದು ನುಡಿದಿದ್ದಾರೆ. ಅದಕ್ಕೆ ನೀವು ಏನು ಹೇಳುವಿರಿ ?

ಉತ್ತರಃ

ಆರೋಪಿ 1ಃ

ಆರೋಪಿ 2ಃ

ಪ್ರಶ್ನೆ.18) ಪ್ರಾಸಾ.9 ರವರು ಮುಂದುವರಿದು ತನ್ನ ಸಾಕ್ಷಿಯಲ್ಲಿ ದಿಃ16.06.2023 ರಂದು ಚಾಸಾ.11 ರವರಿಂದ ಚಾಸಾ.1 ರವರ ಗಾ.ಪ್ರ.ಪತ್ರವನ್ನು ಪಡೆದುಕೊಂಡಿರುತ್ತೇನೆ ಎಂದು ನುಡಿದಿದ್ದಾರೆ. ಅದಕ್ಕೆ ನೀವು ಏನು ಹೇಳುವಿರಿ ?

ಉತ್ತರಃ

ಆರೋಪಿ 1ಃ

ಆರೋಪಿ 2ಃ

ಪ್ರಶ್ನೆ.19) ಪ್ರಾಸಾ.9 ರವರು ಮುಂದುವರಿದು ತನ್ನ ಸಾಕ್ಷಿಯಲ್ಲಿ ದಿಃ24.06.2023 ರಂದು ಚಾಸಾ.12 ರವರಿಂದ ಕೃತ್ಯ ನಡೆದ ಸ್ಥಳದ ಬಗ್ಗೆ ವರದಿಯನ್ನು ಪಡೆದುಕೊಂಡಿರುತ್ತೇನೆ. ದಿಃ07.07.2023 ರಂದು 2 ನೇ ಆರೋಪಿಯು ಮಾನ್ಯ ನ್ಯಾಯಾಲಯದಿಂದ ಜಾಮೀನನ್ನು ಪಡೆದುಕೊಂಡು ಬಂದು ತನ್ನ ಮುಂದೆ ಹಾಜರಾಗಿದ್ದು, ಅವರಿಂದ ಸೂಕ್ತ ಜಾಮೀನನ್ನು ಪಡೆದುಕೂಂಡು ಬಿಡುಗಡೆ ಮಾಡಿರುತ್ತೇನೆ. ನ್ಯಾಯಾಲಯದ ಮುಂದೆ ಇರುವ 2 ನೇ ಆರೋಪಿಯನ್ನು ಗುರುತಿಸುತ್ತೇನೆ ಎಂದು ನುಡಿದಿದ್ದಾರೆ. ಅದಕ್ಕೆ ನೀವು ಏನು ಹೇಳುವಿರಿ ?

ಉತ್ತರಃ

ಆರೋಪಿ 1ಃ

ಆರೋಪಿ 2ಃ

ಪ್ರಶ್ನೆ.20) ಪ್ರಾಸಾ.9 ರವರು ಮುಂದುವರಿದು ತಮ್ಮ ಸಾಕ್ಷಿಯಲ್ಲಿ ಚಾಸಾ.15 ರವರಿಂದ ಆರೋಪಿತರ ಮತ್ತು ಚಾಸಾ.1 ರವರ ಜಾತಿ ಪ್ರಮಾಣ ಪತ್ರವನ್ನು ಪಡೆದುಕೊಂಡಿರುತ್ತೇನೆ ಹಾಗೂ ದಿಃ 15.07.2023 ರಂದು ಚಾಸಾ.6 ಮತ್ತು 7 ರವರ ಹೇಳಿಕೆಗಳನ್ನು, ದಿಃ18.07.2023 ರಂದು ಚಾಸಾ.4 ಮತ್ತು 5 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ ಎಂದು ನುಡಿದಿದ್ದಾರೆ. ಅದಕ್ಕೆ ನೀವು ಏನು ಹೇಳುವಿರಿ ?

ಉತ್ತರಃ

ಆರೋಪಿ 1ಃ

ಆರೋಪಿ 2ಃ

ಪ್ರಶ್ನೆ.21) ಪ್ರಾಸಾ.9 ರವರು ಮುಂದುವರಿದು ತಮ್ಮ ಸಾಕ್ಷಿಯಲ್ಲಿ ದಿಃ 20.07.2023 ರಂದು ಚಾಸಾ.8 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ದಿಃ 20.07.2023 ರಂದು ಚಾಸಾ.13 ರವರಿಂದ ಕೃತ್ಯ ನಡೆದ ಸಂದರ್ಭದಲ್ಲಿ ವಿದ್ಯುತ್ ಸರಬರಾಜು ಇತ್ತು ಮತ್ತು ಸ್ಥಳದಲ್ಲಿ ವಿದ್ಯುತ್ ಕಂಬದಲ್ಲಿ ಬೀದಿ ದೀಪ ಇತ್ತು ಎಂದು ವರದಿಯನ್ನು ಪಡೆದುಕೊಂಡಿರುತ್ತೇನೆ ಎಂದು ನುಡಿದಿದ್ದಾರೆ. ಅದಕ್ಕೆ ನೀವು ಏನು ಹೇಳುವಿರಿ ?

ಉತ್ತರಃ

ಆರೋಪಿ 1ಃ

ಆರೋಪಿ 2ಃ

ಪ್ರಶ್ನೆ.22) ಪ್ರಾಸಾ.9 ರವರು ಮುಂದುವರಿದು ತಮ್ಮ ಸಾಕ್ಷಿಯಲ್ಲಿ ದಿಃ 27.07.2023 ರಂದು ಚಾಸಾ.14 ರವರಿಂದ ನಿಪಿ.10 ರಂತೆ ಸ್ಥಳದ ನಕ್ಷೆಯನ್ನು ಪಡೆದುಕೊಂಡಿರುತ್ತೇನೆ. ಪಂಚನಾಮೆಯ ಕಾಲದಲ್ಲಿ ಮತ್ತು ಸಾಕ್ಷಿ ವಿಚಾರಣೆ ಕಾಲದಲ್ಲಿ ತೆಗೆದಿದ್ದ ಛಾಯಾಚಿತ್ರಗಳು ಮತ್ತು ಆಡಿಯೋ ವೀಡಿಯೋ ಹೇಳಿಕೆಗಳನ್ನು ಸಿಡಿಗೆ ವರ್ಗಾಯಿಸಿ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ ಎಂದು ನುಡಿದಿದ್ದಾರೆ. ಅದಕ್ಕೆ ನೀವು ಏನು ಹೇಳುವಿರಿ ?

ಉತ್ತರಃ

ಆರೋಪಿ 1ಃ

ಆರೋಪಿ 2ಃ

ಪ್ರಶ್ನೆ.23) ಪ್ರಾಸಾ.9 ರವರು ಮುಂದುವರಿದು ತಮ್ಮ ಸಾಕ್ಷಿಯಲ್ಲಿ ಸದರಿ ಸಿಡಿಗೆ ಸಂಬಂಧಿಸಿದಂತೆ ಭಾ.ಸಾ.ಅ.ಕಲಂ.65 ಬಿ ರಡಿಯಲ್ಲಿ ಪ್ರಮಾಣಪತ್ರವನ್ನು ತಯಾರಿಸಿ ಕಡತಕ್ಕೆ ಅಳವಡಿಸಿಕೂಂಡಿರುತ್ತೇನೆ. ನಂತರ ತನಿಖೆಯನ್ನು ಪೂರ್ಣಗೊಳಿಸಿ

ಆರೋಪಿತರ ವಿರುದ್ದ ದೋ.ಪಟ್ಟಿಯನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ ಎಂದು ನುಡಿದಿದ್ದಾರೆ. ಅದಕ್ಕೆ ನೀವು ಏನು ಹೇಳುವಿರಿ?

ಉತ್ತರಃ

ಆರೋಪಿ 1ಃ

ಆರೋಪಿ 2ಃ

ಪ್ರಶ್ನೆ.24) ನೀವು ಏನನ್ನಾದರೂ ಹೇಳುವಿರಾ ?

ಉತ್ತರಃ

ಆರೋಪಿ 1ಃ

ಆರೋಪಿ 2ಃ

ಪ್ರಶ್ನೆ.25) ನಿಮ್ಮ ಪರವಾಗಿ ಸಾಕ್ಷಿದಾರರನ್ನು ವಿಚಾರಣೆ ಮಾಡುವಿರಾ?

ಉತ್ತರಃ

ಆರೋಪಿ 1ಃ

ಆರೋಪಿ 2ಃ

(ಈ ಮೇಲಿನ ಪ್ರಶ್ನೆಗಳನ್ನು ಆರೋಪಿತರಿಗೆ ಅರ್ಥವಾಗುವಂತೆ ಓದಿ ತಿಳಿಸಿ ಅವರು ನೀಡಿದ ಉತ್ತರವನ್ನು ಈ ದಿನ ತೆರೆದ ನ್ಯಾಯಾಲಯದಲ್ಲಿ ಯಥಾ ಪ್ರಕಾರ ದಾಖಲಿಸಿದೆ ಎಂದು ದೃಢೀಕರಿಸಿರುತ್ತೇನೆ)

**(ಎ.ನಾಗಿರೆಡ್ಡಿ )**

ದಿನಾಂಕಃ **04.06.2026** 3 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ತುಮಕೂರು.